ಪ್ರಶ್ನೆ ಸಂಖ್ಯೆ: 9(42)
(ಸದಸ್ಯರಾದ ಶ್ರೀ ಯು.ಟಿ. ಖಾದರ್‌ರವರು ಗೈರು ಹಾಜರಿದ್ದರು)

ಪ್ರಶ್ನೆ ಸಂಖ್ಯೆ: 10(2)
(ಸದಸ್ಯರಾದ ಶ್ರೀ ವೈ.ಎಸ್. ರುದ್ರೇಶ್‌ಗೌಡರವರು ಗೈರು ಹಾಜರಿದ್ದರು)

ಶ್ರೀ ಗೋವಿಂದ ಎಂ. ಕಾರಜೋಳ : ಎರಡು ಮೂರು ದಿವಸ ರಜೆ ಇದ್ದದ್ದರಿಂದ ಸ್ವಲ್ಪ ಅಸ್ತವ್ಯಸ್ತವಾಗಿದೆ.

ಶ್ರೀ ಎ.ಎಸ್. ಪಾಟೀಲ್ : ಸರ್, ಅದೆಲ್ಲಾ ನಿಮಗೆ ಬಾಯಿಪಾಠವಿದೆ. ಪ್ರಶ್ನೆ ಓದಿದರೆ ಉತ್ತರ ಕೊಟ್ಟುಬಿಡುತ್ತೀರಿ.

ಅಧ್ಯಕ್ಷರು : ರಹೀಂ ಖಾನ್ ಅವರು ತಮ್ಮ ಪ್ರಶ್ನೆಯನ್ನು ಕೇಳುವುದು.

ವಿಷಯ: ಬೀದರ್ ಜಿಲ್ಲೆಗೆ ಮಂಜೂರಾದ ಕೆರೆಗಳು

12 (17) ಶ್ರೀ ರಹೀಂ ಖಾನ್ (ಬೀದರ್) : ಮಾನ್ಯ ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಗೆ ಎಷ್ಟು ಕೆರೆಗಳು ಮಂಜೂರಾಗಿವೆ (ಗ್ರಾಮವಾರು ವಿವರಗಳನ್ನು ಒದಗಿಸುವುದು);

ಆ) ಆ ಪೈಕಿ ಬೀದರ್ ಉತ್ತರ ವಿಧಾನಸಭಾ ಕ್ಷೇತ್ರಕ್ಕೆ ಎಷ್ಟು ಕೆರೆಗಳು ಮಂಜೂರಾಗಿದೆ (ಕಳೆದ ಮೂರು ವರ್ಷದ ಗ್ರಾಮವಾರು ವಿವರ ಗಳನ್ನು ಒದಗಿಸುವುದು);

ಇ) ಬೀದರ್ ಉತ್ತರ ವಿಧಾನಸಭಾ ಕ್ಷೇತ್ರದಲ್ಲಿ ಸುಮಾರು 60 ಹಳ್ಳಿಗಳು ಕೂಡಿರುವುದರಿಂದ ಈ ಕೆರೆಗಳನ್ನು ನಿರ್ಮಿಸಲು ಯಾವ ಯಾವ ಗ್ರಾಮಗಳಲ್ಲಿ ಎಷ್ಟೆಷ್ಟು ಎಕರೆಯನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ (ವಿವರ ಒದಗಿಸುವುದು);

ಈ) ಹಾಗಿದ್ದಲ್ಲಿ, ಪ್ರತಿ ಕೆರೆಯ ಅಂದಾಜು ವೆಚ್ಚವೆಷ್ಟು (ವಿವರ ಒದಗಿಸುವುದು);

ಉ) 2012ರ ಸಾಲಿನಲ್ಲಿ ಬೀದರ್ ಉತ್ತರ ಮತ ಕ್ಷೇತ್ರದಲ್ಲಿ ಎಷ್ಟು ಕೆರೆಗಳು ಹಾಗೂ ಚೆಕ್ ಡ್ಯಾಮ್‌ಗಳು ಯಾವ ಯಾವ ಸ್ಥಳಗಳಲ್ಲಿ ನಿರ್ಮಾಣ ಗೊಳ್ಳುತ್ತಿವೆ (ವಿವರ ಒದಗಿಸುವುದು)?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) :

ಅ) ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಗೆ ಸಣ್ಣ ನೀರಾವರಿ ಇಲಾಖೆಯಿಂದ 11 ಕೆರೆಗಳು ಮಂಜೂರಾಗಿವೆ. ಗ್ರಾಮವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಬೀದರ್ ಉತ್ತರ ವಿಧಾನಸಭಾ ಕ್ಷೇತ್ರದಲ್ಲಿ ರಾಜನಾಳ ಗ್ರಾಮದ ಹತ್ತಿರ ಕೆರೆ ಮಂಜೂರಾಗಿದೆ.

ಇ) ಬೀದರ್ ಉತ್ತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ರಾಜನಾಳ ಇಂದು ಕೆರೆಯ ನಿರ್ಮಾಣಕ್ಕಾಗಿ ರಾಜನಾಳ ಗ್ರಾಮದ 15 ಎಕರೆ 07 ಗುಂಟೆ ಹಾಗೂ ವಿಲಾಸಪೂರ ಗ್ರಾಮದ 7 ಎಕರೆ 18 ಗುಂಟೆ ಹೀಗೆ ಒಟ್ಟು 22 ಎಕರೆ 25 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿದೆ. ಭೂಸ್ವಾಧೀನ ಪ್ರಕ್ರಿಯೆಯು 4(1) ಹಂತದಲ್ಲಿದೆ. ಇದಕ್ಕಾಗಿ ರೂ.26.50 ಲಕ್ಷ ಹಣವನ್ನು ಕಂದಾಯ ಇಲಾಖೆಗೆ ಠೇವಣಿ ಮಾಡಲಾಗಿದೆ.

ಈ) ರಾಜನಾಳ ಇಂಗು ಕೆರೆಯ ಅಂದಾಜು ವೆಚ್ಚ ರೂ.111.00 ಲಕ್ಷ.

ಉ) 2012ರ ಸಾಲಿನಲ್ಲಿ ಬೀದರ್ ಉತ್ತರ ಮತ ಕ್ಷೇತ್ರದಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಗಾದಗಿ ಗ್ರಾಮದ ಹತ್ತಿರ ರೂ.5.00 ಲಕ್ಷ ಅಂದಾಜು ವೆಚ್ಚದೊಂದಿಗೆ ಚೆಕ್ ಡ್ಯಾಮ್ ನಿರ್ಮಿಸಲಾಗಿದೆ. ಹಾಗೂ ರಾಜನಾಳ ಇಂಗು ಕೆರೆ ನಿರ್ಮಾಣಗೊಳ್ಳುತ್ತಿದೆ.

ವಿಧಾನ ಸಭೆಯ ಸದಸ್ಯರಾದ ಮಾನ್ಯ ಶ್ರೀ ರಹೀಂ ಖಾನ್ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂ: 17ಕ್ಕೆ ಅನುಬಂಧ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಕೆರೆಗಳ ಹೆಸರು	ತಾಲ್ಲೂಕು	ಗ್ರಾಮದ ಹೆಸರು	ಅಂದಾಜು ಮೊತ್ತ	ಕಾಮಗಾರಿಯ ಪ್ರಸ್ತುತ ಹಂತ
	ಬೀದರ್ ಜಿಲ್ಲೆ:				
1	ಮುಂಗನಾಳ ಇಂಗು ಕೆರೆ	ಔರಾದ	ಮುಂಗನಾಳ	85.00	ಪೂರ್ಣಗೊಂಡಿದೆ
2	ಕೌಡಗಾಂವ ಸ.ನೀ	ಔರಾದ	ಕೌಡಗಾಂವ	143.00	ಪೂರ್ಣಗೊಂಡಿದೆ
3	ರಾಜನಾಳ ಇಂಗು ಕೆರೆ	ಬೀದರ	ರಾಜನಾಳ	111.00	ಪ್ರಗತಿಯಲ್ಲಿದೆ

4	ಕೊಹಿನೂರ ಭೋಸಗಾ ಇಂಗು ಕೆರೆ	ಬಸವ ಕಲ್ಯಾಣ	ಕೋಹಿ ನೂರು	140.00	ಪ್ರಗತಿಯಲ್ಲಿದೆ
5	ಒಡ್ಡರ್ಗಾ ಸನೀ ಕೆರೆ	ಬಸವ ಕಲ್ಯಾಣ	ಒಡ್ಡರ್ಗಾ	160.00	ಪ್ರಾರಂಭಿಸ ಬೇಕಾಗಿದೆ
6	ವಾಂಜರವಾಡಿ ಸನೀ ಕೆರೆ	ಬಸವ ಕಲ್ಯಾಣ	ವಾಂಜರ ವಾಡಿ	175.00	ಪ್ರಾರಂಭಿಸ ಬೇಕಾಗಿದೆ
7	ಮುಡಬಿ ಸನೀ ಕೆರೆ	ಬಸವ ಕಲ್ಯಾಣ	ಮುಡಬಿ	140.00	ಪ್ರಗತಿಯಲ್ಲಿದೆ
8	ಕಿಟ್ಟಾ ಸನೀ ಕೆರೆ	ಬಸವ ಕಲ್ಯಾಣ	ಕಿಟ್ಟಾ	150.00	ಪ್ರಾರಂಭಿಸ ಬೇಕಾಗಿದೆ
9	ಧನ್ನೂರಾ(ಕೆ) ಇಂಗು ಕೆರೆ	ಬಸವ ಕಲ್ಯಾಣ	ಧನ್ನೂರಾ (ಕೆ)	120.00	ಪ್ರಗತಿಯಲ್ಲಿದೆ
10	ಪೋಲಕಪಳ್ಳಿ ಇಂಗು ಕೆರೆ	ಹುಮನಾ ಬಾದ	ಪೋಲಕ ಪಳ್ಳಿ	150.00	ಪ್ರಾರಂಭಿಸ ಬೇಕಾಗಿದೆ
11	ಶ್ರೀಮಳಿ ಇಂಗು ಕೆರೆ	ಭಾಲ್ಕಿ.	ಶ್ರೀಮಳಿ	40.00	ಪೂರ್ಣ ಗೊಂಡಿದೆ

ಶ್ರೀ ರಹೀಂ ಖಾನ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಮಾನ್ಯ ಮಂತ್ರಿಗಳು ಕೊಟ್ಟಿದ್ದಾರೆ. ಭೂಸ್ವಾಧೀನದಲ್ಲಿ ಇಲ್ಲಿಯವರೆಗೆ ಎಷ್ಟು ದಿನಗಳಿಂದ ಡಿಲೇಯಾಗಿದೆ? ಅದರಿಂದ ಎಷ್ಟು ಲಾಸ್ ಆಗಿದೆ? ಒಂದು ವರ್ಷವಾಯಿತು. ಇನ್ನೂ ಭೂಸ್ವಾಧೀನವಾಗಿಲ್ಲ, ಆ ಬಗ್ಗೆ ಮಂತ್ರಿಗಳು ಉತ್ತರ ನೀಡಬೇಕೆಂದು ಕೇಳಬಯಸುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, 22.25 ಎಕರೆ ಜಮೀನನ್ನು ಅಕ್ವೈರ್ ಮಾಡಬೇಕೆಂದು Assistant Commissioner ಗೆ 26.50 ಲಕ್ಷ ರೂ.ಗಳನ್ನು ತುಂಬಿರುತ್ತೇವೆ. ಕಂದಾಯ ಇಲಾಖೆಯ ಅಧಿಕಾರಿಗಳು ಇನ್ನೂ 4(1) ಹಂತದಲ್ಲಿಯೇ ಇದ್ದಾರೆ. ಅದಕ್ಕಾಗಿ ಲುಕ್ಸಾನ್ ಆಗುವ ಪ್ರಶ್ನೆ ಬರುವುದಿಲ್ಲ. ಇದರಲ್ಲಿ ಹಾನಿ ಎನ್ನುವುದು ಏನೂ ಇರುವುದಿಲ್ಲ ಆದರೆ 4(1) ಆದ ದಿನಾಂಕದಿಂದ ಮುಂದೆ ಪ್ರಕ್ರಿಯೆ ಪ್ರಾರಂಭವಾಗುತ್ತದೆ. 6(1), 9(1) ಆಗಿ ಅವಾರ್ಡ್ ಆಗಬೇಕು. ಈ ರೀತಿ ವಿವಿಧ ಹಂತಗಳಲ್ಲಿ ಆಗುತ್ತಿರುತ್ತದೆ. ಕೂಡಲೇ ಮಾಡಿಸಿಕೊಡುವುದಕ್ಕೆ ವ್ಯವಸ್ಥೆಯನ್ನು ಮಾಡುತ್ತೇನೆ.